**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಶಹಬಾದ</u>**

**CC No: 222/2010**

CW : 13 PW: 13

| | | |
|---|---|---|
| ಹೆಸರು | : | ಕೆ. ಎಸ್.ಲತಾಕುಮಾರಿ |
| ತಂದೆಯ ಹೆಸರು | : | ಸಿದ್ದಪ್ಪ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಕರಿಗೆ ಸಬಲೀಕರಣ ಇಲಾಖೆ, |
| ಸ್ಥಳ | : | ಬೆಂಗಳೂರು |

**(ದಿನಾಂಕ: 13-04-2022 ರಂದು ಸಾಕ್ಷಿಯು ವೀಡಿಯೋ ಕಾನಪರನ್ಸ ಮೂಲಕ ಹಾಜರಾಗಿದ್ದು, ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು)**

**<u>ಮುಖ್ಯ ವಿಚಾರಣೆ: ಸ.ಸ.ಅ ವಕೀಲರಿಂದ</u>**

ದಿಃ 16-03-2009 ರಿಂದ 2011 ರವರೆಗೆ ಸಹಾಯಕ ಆಯುಕ್ತರು ಸೇಡಂ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ. ಅಫೀಲ್ ಸಂಖ್ಯೆ 139/2007-08 ಇದರಲ್ಲಿ ಚಾಸಾ-1 ರವರು ಮರತೂರ ಗ್ರಾಮದ ಚಿತ್ತಾಪೂರ ತಾಲೂಕಿನವರಿದ್ದು, ನಾಗಪ್ಪ ತಂದೆ ಗುರುಲಿಂಗಪ್ಪ ಮಾಸಕಲ್, ಸಾಃ ಮರತೂರ ಮತ್ತು ಗ್ರಾಮ ಲೆಕ್ಕಿಗರು ಮರತೂರ ಹಾಗೂ ಕಂದಾಯ ನಿರೀಕ್ಷಕರು ಶಹಾಬಾದ ಇವರ ವಿರುದ್ಧ ನಮ್ಮ ನ್ಯಾಯಾಲಯದಲ್ಲಿ ಒಂದು ಅಪೀಲು ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಚಿತ್ತಾಪೂರ ತಾಲೂಕಿನ ಮರತೂರ ಗ್ರಾಮದ ಸರ್ವೇ ನಂಃ 449 ರಲ್ಲಿ 5 ಎಕರೆ 37 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ಮಾಡಿದ ಮುಟೇಷನ್ ಸಂಖ್ಯೆ 39/2007-08, ದಿಃ 01-09-2007 ಸದರಿ ಮುಟೇಷನ್ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿದ್ದು ಇರುತ್ತದೆ. ಪ್ರಕರಣದ ವಿಚಾರಣೆಯನ್ನು ಪೂರ್ಣಗೊಳಿಸಿ ಚಿತ್ತಾಪೂರ ತಾಲೂಕಿನ ಮರತೂರ ಗ್ರಾಮದ ಸರ್ವೇ ನಂಃ 449 ರಲ್ಲಿ 5 ಎಕರೆ 37 ಗುಂಟೆ ಜಮೀನಿಗೆ ಸಂಬಂಧಿಸಿದ ಮುಟೇಷನ್ ಸಂಖ್ಯೆ 39/2007-08 ನೇದ್ದನ್ನು ದಿಃ 01-07-2007 ನ್ನು ರದ್ದುಪಡಿಸಲಾಗಿದೆ ಅಂತಾ ದಿಃ 17-07-2009 ರಂದು ಆದೇಶವನ್ನು ಮಾಡಿರುತ್ತೇನೆ. ನನ್ನ ಹಿಂದಿನ ಸಹಾಯಕ ಅಯುಕ್ತರರು ದಿಃ 01-04-2008 ರಂದು ಮುಟೇಷನ್ ಸಂಖ್ಯೆ 39/2007-08 ನೇದ್ದರಿಗೆ ತಡೆಯಾಜ್ಞೆಯನ್ನು ಮಾಡಿದ್ದು ಇರುತ್ತದೆ. ಸಾಕ್ಷಿಗೆ ತಾವು ಮಾಡಿದ ಅದೇಶದ ಪ್ರತಿಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-10 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ತಮ್ಮ ಹಿಂದಿನ ಸಹಾಯಕ ಅಯುಕ್ತರರು ಮಾಡಿರುವ ಆದೇಶವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-11 ಎಂದು ಗುರುತಿಸಲಾಗಿದೆ. ಸಾಕ್ಷಿಯು ಎಂ. ಆರ್ ಸಂಖ್ಯೆ 39/2007-08 ನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-8 ಎಂದು

**CC No: 222/2010**
CW : 13 PW: 13

ಗುರುತಿಸಲಾಗಿದೆ.

**<u>ಪಾಟೀ ಸವಾಲು: ಶ್ರೀ</u> ಎಸ್. ಎನ್. ಪಿ. ಆರೋಪಿ ಪರ ವಕೀಲರಿಂದಃ**

ಸಾಕ್ಷಿಗೆ ಅಪೀಲ ನಂಃ 139/2007-08 ನೇದ್ದರ ಕಡತಗಳು ಈಗ ನಿಮ್ಮ ಬಳಿ ಇರುತ್ತವೇಯೇ ಅಂದರೆ ಸಾಕ್ಷಿಯು ಇಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ನಿಮ್ಮ ಆದೇಶದಲ್ಲಿ ತೋರಿಸಿರುವ 5 ಕಾರಣಗಳಿಗೆ ಹಾಗೂ ಅರ್ಜಿದಾರನ ಅಪೀಲಿಗೆ ಆದೇಶ ಮಾಡಿರುತ್ತೀರಿಯೇ ಅಂದರೆ ಸಾಕ್ಷಿಯು ತಮ್ಮ ಅದೇಶಕ್ಕೆ ಇರುವ 5 ಕಾರಣಗಳ ಮೇಲೆ ಆದೇಶ ಮಾಡಿರುವುದಾಗಿ ಹೇಳುತ್ತಾರೆ. ಸದರಿ ಕಾರಣಗಳು ಅರ್ಜಿದಾರನ ಅರ್ಜಿಯ ಮೇಲೆ (ಪೇಟಿಷನ್) ಮೇಲೆ ಹಾಗೂ ಆತನ ಹೇಳಿಕೆಯ ಮೇಲೆ ಮಾಡಿರುತ್ತೀರಿಯೇ ಅಂದರೆ ಸಾಕ್ಷಿಯು ಹೌದು ಎಂದು ಹೇಳುತ್ತಾರೆ. ಆದೇಶದಲ್ಲಿ ಕಾಣಿಸಿರುವ 5 ಕಾರಣಗಳ ಮುಖ್ಯ ಉದ್ದೇಶ ಅರ್ಜಿದಾರ ತನ್ನ ತಂದಗೆ 3 ಜನ ಮಕ್ಕಳಿದ್ದು, ನನ್ನ ಅಣ್ಣ ನಾಗಪ್ಪನ ಹೆಸರಿಗೆ ಮಾತ್ರ ಮುಟೇಷನ್ ದಾಖಲು ಆಗಿದ್ದು ಆ ಕಾರಣಕ್ಕಾಗಿಯೇ ಅಪೀಲು ಹಾಕಿದ ಬಗ್ಗೆ ಕೇಳಿದ ಪ್ರಶ್ನೆಗೆ ಸಾಕ್ಷಿಯು ಅರ್ಜಿದಾರರಿಗೆ ನೋಟಿಸ ಹೋಗಿರುವುದಿಲ್ಲ ಹಾಗೂ ಮುಟೇಷನ್ ಎಂಟ್ರಿ ಕಾನೂನುಬದ್ಧ ಇರುವುದಿಲ್ಲ ಎಂಬ ಕಾರಣಗಳಿಗಾಗಿ ಕಾರಣಗಳನ್ನು ರಚಿಸಿರುವುದಾಗಿ ಹೇಳುತ್ತಾರೆ. ಅಪೀಲ ನಂಃ 139/2007-08 ರ ಅರ್ಜಿದಾರ, ಎದುರುಗಾರ ಹಾಗೂ ಮೂರನೇ ಸಹೋದರ ಅವಶ್ಯಕ ಪಕ್ಷಗಾರ ಆಗುತ್ತಾನೆ ಅಂದರೆ ಸರಿ. ಸಾಕ್ಷಿಯು ಮುಂದುವರೆದು 3 ನೇ ಸಹೋದರ ಅರ್ಜಿದಾರನೂ ಸಹ ಆಗಬಹುದಿತ್ತು ಅಥವಾ ಎದುರುಗಾರನು ಸಹ ಆಗಬಹುದಿತ್ತು ಅಂತಾ ಹೇಳುತ್ತಾರೆ. ಆದ್ದರಿಂದ 3 ನೇ ಸಹೋದರನ ಗೈರು ಹಾಜರಿಯಲ್ಲಿ ಆದೇಶ ಮಾಡಲು ಬರುವುದಿಲ್ಲ ಅಂದರೆ ಸಾಕ್ಷಿಯು ಆದೇಶ ಮಾಡಲು ಬರುತ್ತದೆ ಎಂದು ಹೇಳುತ್ತಾರೆ. 3 ನೇ ಸಹೋದರನ ಗೈರು ಹಾಜರಿಯಲ್ಲಿ ಆದೇಶ ಮಾಡಲು ಬರುತ್ತದೆ ಅಂತಾ ಹೇಳುತ್ತಿದ್ದು ಅದು ತಪ್ಪು ಇರುತ್ತದೆ ಅಂದರೆ ಸಾಕ್ಷಿಯು ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಸಾಕ್ಷಿಯು ವೀಡಿಯೋ ಕಾನಪರನ್ಸ ಮೂಲಕ ಹಾಜರಾಗಿದ್ದು, ಆ ಕಾರಣದಿಂದ ಸಾಕ್ಷಿಯ ಸಹಿಯನ್ನು ಪಡೆದುಕೊಳ್ಳಲು ಆಗಿರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೆ. ಸರಿ ಇದೆ.**
**-Sd-**
**ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ.**
**ನ್ಯಾಯಾಧೀಶರು, ಶಹಬಾದ.**